THE TIMES OF INDIA
Dated, Wednesday, 12th July– 2017
Pg.No.07

# 'Local students losing 1,000 MBBS seats'

TIMES NEWS NETWORK

**Bengaluru:** The seat matrix in Karnataka's private medical colleges is skewed, due to which local students are losing 1,000 MBBS seats, young doctors, medicos, NEET candidates and their parents alleged on Tuesday.

Members of the Karnataka Medical Students and Youth Doctors' Association (KMSYDA), NEET candidates and their parents alleged that distribution of seats in private medical colleges in the state gives an advantage to outstation students over domiciled students.



Syed Asif

**CRYING FOUL:** NEET candidates and parents said distribution of seats in private medical colleges gives advantage to outstation students

## NEET WORRIES

This is because a notification issued by the Karnataka Examinations Authority (KEA) allows students from different states to register with it, they claimed.

With NEET becoming mandatory this year for admissions to both private and government medical colleges, KEA is now overseeing all admissions to MBBS.

### 'Why is govt prioritizing outstation students?'

"The 1,000 seats could have gone to meritorious, local students who could have served the state in future. Why is our government alone prioritizing students from other states when Tamil Nadu, Andhra Pradesh and Maharashtra are not doing it," asked Dr Bharath Kumar, president of KMSYDA.

Kumar added that no other states were following any such procedure.

He said unlike KEA, respective authorities in Tamil Nadu, Maharashtra and Andhra Pradesh had restricted admissions to students from their states only.

Alleging that low fees, a cosmopolitan culture and the title of 'education hub' were attracting outstation students, parents of aspiring candidates said the government needed to prioritize native students.

"The fees in Karnataka's private medical colleges is around Rs 6,00,000, while institutions in other states charge approximately Rs 12,00,000. When the government is constantly citing a shortage of doctors, especially in rural areas, it should make it easier for local students to study here," said Karunakar Reddy, parent of an aspiring NEET candidate.

Dr Bharath said the time requirement for the domicile status was shorter is Karnataka. "It is seven years. In Maharashtra, it is 10 years and in West Bengal, 15. Students who come here for MBBS, which has a five-and-a-half-year study period, end up staying and getting an advantage in postgraduation also. The government should look into this," he said.

The group has planned a rally from Mysore Bank Circle to Maurya Circle on Thursday to raise awareness about the matter.

ದಾಖಲೆ ಕಡ್ಡಾಯ ■ ಸಿಇಟಿಯಡಿ ಪ್ರವೇಶ ಪಡೆದವರಿಗೆ ಮೂಲ ದಾಖಲೆ ನೀಡದ ಕಾಲೇಜುಗಳು

# ನೀಟ್ 'ಸೀಟ್' ಪಡೆಯಲು ದಾಖಲೆಗಳಿಗೆ ಪರದಾಟ

■ ರಾಜು ಖಾರ್ವಿ

ಬೆಂಗಳೂರು: ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ತೇರ್ಗಡೆಯಾದವರು ತಮ್ಮ ಇಚ್ಛೆಯ ಕಾಲೇಜು ಸೇರಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ತಾವು ಈಗಾಗಲೇ ಸೇರಿಕೊಂಡಿರುವ ಕಾಲೇಜಿನ ಶೈಕ್ಷಣಿಕ ವಾತಾವರಣ ಸೇರಿ ಅನೇಕ ವಿಷಯಗಳು ಇಷ್ಟವಾಗದ ಕಾರಣ ಕಾಲೇಜು ತ್ಯಜಿಸಿ ಬೇರೆ ಕಾಲೇಜು ಸೇರಿಕೊಳ್ಳುವುದು ಸಹಜ. ಆದರೆ, ಇಂತಹ ವಿದ್ಯಾರ್ಥಿಗಳು ನೀಟ್‌ನಲ್ಲಿ ಉತ್ತಮ ಅಂಕ ಪಡೆದಿದ್ದರೂ ಸರ್ಕಾರಿ ಕೋಟಾದ ಸೀಟು ಸುಲಭವಾಗಿ ಪಡೆದುಕೊಳ್ಳಲು ಅವಕಾಶ ಇಲ್ಲದಾಗಿದೆ.

ನೀಟ್ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ನೋಂದಣಿ ಮಾಡಿಕೊಳ್ಳುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸೂಚನೆ ನೀಡಿದೆ. ಅದರಂತೆ ಸಾವಿರಾರು ವಿದ್ಯಾರ್ಥಿಗಳು ನೋಂದಣಿ ಮಾಡಿಕೊಳ್ಳುತ್ತಿದ್ದಾರೆ. ಪ್ರಾಧಿಕಾರ ನಡೆಸಿರುವ ಸಾಮಾನ್ಯ ಪ್ರವೇಶ ಪರೀಕ್ಷೆ ಹಾಗೂ ಕೇಂದ್ರ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸಿದ ನೀಟ್ ಈ ಎರಡು ಪರೀಕ್ಷೆ ಬರೆದ ಅಭ್ಯರ್ಥಿಗಳಲ್ಲಿ ಅನೇಕರು ಈಗಾಗಲೇ ದಾಖಲೆ ಪರಿಶೀಲನೆ ಮಾಡಿಸಿಕೊಂಡಿದ್ದಾರೆ. ಸಿಇಟಿ ಬರೆಯದೇ ನೀಟ್ ಮಾತ್ರ ಬರೆದಿರುವ ಅಭ್ಯರ್ಥಿಗಳು ಯಾರೂ ಕೂಡ ದಾಖಲೆ ಪರಿಶೀಲನೆ ಮಾಡಿಸಿಕೊಂಡಿಲ್ಲ.

ಈಗಾಗಲೇ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿದ್ದು, ನೀಟ್‌ನಲ್ಲಿ ಉತ್ತಮ ರ್‍ಯಾಂಕ್ ಬಂದಿರುವ ಸಾವಿರಾರು ವಿದ್ಯಾರ್ಥಿಗಳಿಗೆ ದಾಖಲೆ ಪರಿಶೀಲನೆ ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಾರಣ, ಕಾಲೇಜು ಪ್ರವೇಶದ ಸಂದರ್ಭದಲ್ಲಿ ನೀಡಿರುವ ಮೂಲ ದಾಖಲೆಗಳನ್ನು ಕಾಲೇಜು ಆಡಳಿತ ಮಂಡಳಿ ನೀಡಲು ನಿರಾಕರಿಸುತ್ತಿದೆ. ಹಾಗೆಯೇ ಪ್ರಾಧಿಕಾರವು ಮೂಲ ದಾಖಲೆ ಇಲ್ಲದೇ ಪ್ರವೇಶ ನೀಡುವುದಿಲ್ಲ ಎಂದು ಪಟ್ಟು ಹಿಡಿದಿದೆ. ಇದರಿಂದಾಗಿ ಅರ್ಹ ಅಭ್ಯರ್ಥಿಗಳಿಗೆ ತಾವು ಬಯಸಿದ ಕಾಲೇಜಿನಲ್ಲಿ ಸೀಟು ಪಡೆಯಲು ಸಾಧ್ಯವಾಗುತ್ತಿಲ್ಲ.

ಕಾಲೇಜು ಆಡಳಿತ ಮಂಡಳಿಗಳು ಮೂಲ ದಾಖಲೆ ಬದಲಿಗೆ ದಾಖಲೆಗಳು ತಮ್ಮ ಬಳಿಯೇ ಇರುವ ಕುರಿತು ಕಸ್ಟಡಿ ಪ್ರಮಾಣ ಪತ್ರ ನೀಡಲು ತಯಾರಿದ್ದಾರೆ. ಆದರೆ, ಪ್ರಾಧಿಕಾರದ ಅಧಿಕಾರಿಗಳು ಕಸ್ಟಡಿ ಪ್ರಮಾಣ ಪತ್ರದ ಆಧಾರದಲ್ಲಿ ಸೀಟು ಹಂಚಿಕೆ ಮಾಡಲು ಸಾಧ್ಯವಿಲ್ಲ ಎನ್ನುತ್ತಿದ್ದಾರೆ. ಪ್ರಾಧಿಕಾರದ ಈ ನಿರ್ಧಾರದಿಂದ ಸಾವಿರಾರು ವಿದ್ಯಾರ್ಥಿಗಳು ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ.

ಮೂಲ ದಾಖಲೆಗಳನ್ನು ಈಗಾಗಲೇ ಕಾಲೇಜಿಗೆ ನೀಡಲಾಗಿದೆ. ನೀಟ್‌ನಲ್ಲಿ ಉತ್ತಮ ರ್‍ಯಾಂಕ್ ಬಂದಿರುವ ಹಿನ್ನೆಲೆಯಲ್ಲಿ ಕಾಲೇಜು ಬದಲಾವಣೆಗೆ ಮುಂದಾಗಿದ್ದು, ಕಾಲೇಜು ಆಡಳಿತ ಮಂಡಳಿ ಮೂಲ ದಾಖಲೆ ನೀಡಲು ನಿರಾಕರಿಸುತ್ತಿದ್ದಾರೆ. ಕಸ್ಟಡಿ ಪ್ರಮಾಣ ಪತ್ರ ನೀಡುವುದಾಗಿ ಹೇಳುತ್ತಿದ್ದಾರೆ. ಆದರೆ, ಪ್ರಾಧಿಕಾರದ ಅಧಿಕಾರಿಗಳು ಕಸ್ಟಡಿ ಪ್ರಮಾಣಪತ್ರ ನಿರಾಕರಿಸುತ್ತಿದ್ದಾರೆ. ನಮ್ಮ ಇಚ್ಛೆಯ ಕಾಲೇಜಿನಲ್ಲಿ ಸೇರಿಕೊಳ್ಳದ ಸ್ಥಿತಿ ನಿರ್ಮಾಣವಾಗಿದೆ ಎಂದು ವಿದ್ಯಾರ್ಥಿಗಳು ನೋವು ಹೇಳಿಕೊಂಡರು.

> "ಮೂಲ ದಾಖಲೆ ಪರಿಶೀಲನೆ ಮಾಡದೇ ಸೀಟು ಹಂಚಿಕೆ ಸಾಧ್ಯವಿಲ್ಲ. ಕಸ್ಟಡಿ ಪ್ರಮಾಣ ಪತ್ರವನ್ನು ಆಧಾರವಾಗಿ ಪರಿಗಣಿಸಲು ಸಾಧ್ಯವಿಲ್ಲ. ಸರ್ಕಾರದ ನಿಯಮದಂತೆ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಕಡ್ಡಾಯವಾಗಿ ದಾಖಲೆ ಪರಿಶೀಲನೆ ಮಾಡಿಕೊಳ್ಳಬೇಕು.
>
> • ಗಂಗಾಧರಯ್ಯ, ಆಡಳಿತಾಧಿಕಾರಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ

## 2ನೇ ಸುತ್ತಿನ ಕೌನ್ಸೆಲಿಂಗ್ ಮುಂದೂಡಲು ಒತ್ತಾಯ

ವೈದ್ಯಕೀಯ ಮತ್ತು ದಂತವೈದ್ಯಕೀಯ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆ ಜು.25ರಂದು ನಡೆಯಲಿದ್ದು, ಇದಾದ ನಂತರವೇ 2ನೇ ಸುತ್ತಿನ ಎಂಜಿನಿಯರಿಂಗ್ ಕೋರ್ಸ್‌ಗಳ ಸೀಟು ಹಂಚಿಕೆ ಮಾಡಬೇಕು. ವೈದ್ಯಕೀಯ ಸೀಟು ಪಡೆದ ಅನೇಕ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಸೀಟು ಮರಳಿಸುವ ಸಾಧ್ಯತೆ ಇದೆ. ಇದರಿಂದ ಸೀಟುಗಳ ಸಂಖ್ಯೆ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೂ ಅನುಕೂಲವಾಗಲಿದೆ. ಹೀಗಾಗಿ ಪ್ರಾಧಿಕಾರವು ಎಂಜಿನಿಯರಿಂಗ್ ಕೋರ್ಸ್‌ನ 2ನೇ ಸುತ್ತಿನ ಸೀಟು ಹಂಚಿಕೆ ಜು.25ರ ನಂತರವೇ ಮಾಡಬೇಕು ಎಂಬುದು ವಿದ್ಯಾರ್ಥಿಗಳ ಒತ್ತಾಯವಾಗಿದೆ.

# ನೀಟ್: ಅಂಗವಿಕಲ ಕೋಟಾಗೆ ನಿಯಮಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಣಕಾಲು ಕೆಳಗಿನ ಭಾಗ (ಲೋಯರ್ ಲಿಂಬ್) ಶೇ 40ಕ್ಕಿಂತ ಹೆಚ್ಚು ನಿಷ್ಕ್ರಿಯವಾಗಿದ್ದರಷ್ಟೇ ಅಂಗವಿಕಲ ಕೋಟಾದಡಿ ಅಭ್ಯರ್ಥಿಗಳು ವೈದ್ಯಕೀಯ, ದಂತ ವೈದ್ಯಕೀಯ ಸೀಟು ಪಡೆಯಲು ಅರ್ಹರಾಗಿರುತ್ತಾರೆ. ದೃಷ್ಟಿ, ಶ್ರವಣ, ಮತ್ತು ವಾಕ್ ದೋಷ ಇರುವವರಿಗೆ ಈ ಕೋಟಾದಡಿ ಪ್ರವೇಶ ಲಭ್ಯವಿಲ್ಲ.

'ನೀಟ್' ಮೆರಿಟ್ ಪಡೆದು ಅಂಗವಿಕಲರ ಕೋಟಾದಡಿ ಸೀಟು ಪಡೆಯುವುದಕ್ಕಾಗಿ ಕಾಯುತ್ತಿರುವ ವಿದ್ಯಾರ್ಥಿಗಳಿಗೆ ಈ ನಿಯಮ ದಿಗ್ಭ್ರಮೆ ಮೂಡಿಸಿದೆ.

ಈ ವರ್ಷದಿಂದ ವೈದ್ಯಕೀಯ ಕೋರ್ಸ್‌ಗಳಿಗೆ ಏಕರೂಪದ ಪರೀಕ್ಷೆ ಮತ್ತು ಕೌನ್ಸೆಲಿಂಗ್ ವ್ಯವಸ್ಥೆ ಜಾರಿಯಾಗಿರುವುದರಿಂದ ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ಅಂಗವಿಕಲ ಕೋಟಾದ ನಿಯಮಗಳನ್ನು ಬದಲಿಸಿದೆ. ವೈದ್ಯಕೀಯ ಪ್ರವೇಶ ಕೌನ್ಸೆಲಿಂಗ್‌ನ ಮಾಹಿತಿ ಪುಸ್ತಕದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇದನ್ನು ಸ್ಪಷ್ಟಪಡಿಸಿದೆ.

'ಎಂಸಿಐ ನಿಯಮವನ್ನು ಎಲ್ಲ ರಾಜ್ಯಗಳೂ ಅನುಸರಿಸುತ್ತವೆ. ಅದರಂತೆ ನಾವೂ ಪಾಲಿಸುವುದು ಅನಿವಾರ್ಯ' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಂ.ಎಸ್. ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

**ಮುಖ್ಯಾಂಶಗಳು**

- ದೃಷ್ಟಿ, ಶ್ರವಣ, ವಾಕ್ ದೋಷವಿದ್ದವರು ಅಂಗವಿಕಲರಲ್ಲ
- ಅಂಗವಿಕಲ ಕೋಟಾಕ್ಕೆ ಎಂಸಿಐ ನಿಯಮ
- ಎಂಬಿಬಿಎಸ್, ಬಿಡಿಎಸ್ ಸೀಟು ಕೈತಪ್ಪುವ ಆತಂಕದಲ್ಲಿ ವಿದ್ಯಾರ್ಥಿಗಳು

ಮೊಣಕಾಲು ಕೆಳಗಿನ ಭಾಗ ಶೇ 50ರಿಂದ ಶೇ 70ರಷ್ಟು ನಿಷ್ಕ್ರಿಯ ಇರುವ ಅಭ್ಯರ್ಥಿಗಳನ್ನು ಸೀಟು ಹಂಚಿಕೆಯಲ್ಲಿ ಮೊದಲು ಪರಿಗಣಿಸಲಾಗುತ್ತದೆ. ಬಳಿಕ ಶೇ 40ರಿಂದ ಶೇ 50ರಷ್ಟು ನ್ಯೂನತೆ ಇರುವವರನ್ನು ಪರಿಗಣಿಸಲಾಗುತ್ತದೆ. ಶೇ 40ಕ್ಕಿಂತ ಕಡಿಮೆ ನಿಷ್ಕ್ರಿಯತೆ ಇದ್ದರೆ ಅವರು ಅಂಗವಿಕಲ ಕೋಟಾದಡಿ ಬರುವುದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

**ರಾಜ್ಯದ ಮಾನದಂಡ ಬದಲಾಗಿಲ್ಲ:** ಈ ಹಿಂದೆ ವೈದ್ಯಕೀಯ, ದಂತ ವೈದ್ಯಕೀಯ ಸೀಟುಗಳನ್ನು ಸಿಇಟಿ ಮೆರಿಟ್ ಮೂಲಕ ಹಂಚಿಕೆ ಮಾಡುವಾಗ ಯಾವುದೇ ರೀತಿಯ ಅಂಗವಿಕಲತೆ ಇದ್ದರೂ ಪರಿಗಣಿಸಲಾಗುತ್ತಿತ್ತು. ಈ ವರ್ಷದ ಎಂಜಿನಿಯರಿಂಗ್ ಸೇರಿದಂತೆ ಎಲ್ಲ ವೃತ್ತಿಪರ ಕೋರ್ಸ್‌ಗಳಿಗೂ ಇದನ್ನು ಅನುಸರಿಸಲಾಗುತ್ತಿದೆ.

ಸಂಯುಕ್ತ ಕರ್ನಾಟಕ



# 'ನೀಟ್'ನಿಂದ ವಿದ್ಯಾರ್ಥಿಗಳಿಗೆ ಕುತ್ತು

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಎಂಬಿಬಿಎಸ್ ಮತ್ತು ಬಿಡಿಎಸ್ ಕೋರ್ಸ್‌ಗಳಲ್ಲಿ ನೀಟ್ ಪಾಸಾದ ಎಲ್ಲಾ ರಾಜ್ಯದ ವಿದ್ಯಾರ್ಥಿಗಳಿಗೆ ರಾಜ್ಯದಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವುದು ಸರಿಯಲ್ಲ ಎಂದು ಯುವ ವೈದ್ಯರ ಸಂಘದ ಅಧ್ಯಕ್ಷ ಡಾ. ಭರತ್‌ಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಇಎ ಆದೇಶದಿಂದ ಎಂಬಿಬಿಎಸ್ ಮತ್ತು ಬಿಡಿಎಸ್ ಕೋರ್ಸ್‌ಗೆ ನೀಟ್ ಪಾಸಾದ ಎಲ್ಲಾ ರಾಜ್ಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ ಆದರೆ ತಮಿಳುನಾಡು, ಮಹಾರಾಷ್ಟ್ರ, ಮಧ್ಯಪ್ರದೇಶ ಉತ್ತರಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ. ಇತರೆ ರಾಜ್ಯಗಳಲ್ಲಿ ರಾಜ್ಯದ ಅರ್ಧದಷ್ಟು ಶುಲ್ಕವು ಹೆಚ್ಚಿರುವುದರಿಂದ ಕರ್ನಾಟಕ್ಕೆ ಹೆಚ್ಚಾಗಿ ಎಲ್ಲಾ ವಿದ್ಯಾರ್ಥಿಗಳು ಬರುವುದರಿಂದ ರಾಜ್ಯದ ವಿದ್ಯಾರ್ಥಿಗಳ ಕನಸು ಕನಸಾಗಿಯೇ ಉಳಿಯಲಿದೆ ಎಂದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆದೇಶದಿಂದ ಹೆಚ್ಚು ಸೀಟ್‌ಗಳು ಹೊರ ರಾಜ್ಯದ ವಿದ್ಯಾರ್ಥಿಗಳ ಪಾಲಾಗಲಿದ್ದು, ವ್ಯಾಸಂಗ ಮುಗಿದ ನಂತರ ತಮ್ಮ ರಾಜ್ಯಗಳಿಗೆ ಸೇವೆ ಸಲ್ಲಿಸಲು ಹೋಗುತ್ತಾರೆ. ಕೆಇಎ ಆದೇಶದ ವಿರುದ್ಧ ಜು.13ರಂದು ಕೆಇಎ ಕಚೇರಿ ಮುಂದೆ ಪ್ರತಿಭಟನೆ ಮಾಡಲಾಗಿವುದು ಎಂದು ವಿವರಿಸಿದರು.